## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1676 (1936) |
| ಸದಸ್ಯರ ಹೆಸರು | : | ಶ್ರೀ ಗೋವಿಂದ ರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 24.03.2026 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಮೂರು ವರ್ಷಗಳಲ್ಲಿ ಕೋಲಾರ ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಎಷ್ಟು ಖಾಸಗಿ ವಸತಿ ಬಡಾವಣೆಗಳಿಗೆ ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರವು (KUDA) ಅನುಮೋದನೆ ನೀಡಿದೆ; (ವರ್ಷವಾರು ಮಾಹಿತಿ ನೀಡುವುದು) | ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಳೆದ ಮೂರು ವರ್ಷಗಳಲ್ಲಿ ವಸತಿ ಬಡಾವಣೆಗಳಿಗೆ ಅನುಮೋದನೆ ನೀಡಿದ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.<br>1. 2023-24ನೇ ಸಾಲಿನಲ್ಲಿ 04 ಪ್ರಕರಣ ವಿಸ್ತೀರ್ಣ 22ಎ-11.08 ಗುಂಟೆ<br>2. 2024-25ನೇ ಸಾಲಿನಲ್ಲಿ 03 ಪ್ರಕರಣ ವಿಸ್ತೀರ್ಣ 14ಎ-19ಗುಂಟೆ<br>3. 2025-26ನೇ ಸಾಲಿನಲ್ಲಿ 06 ಪ್ರಕರಣ ವಿಸ್ತೀರ್ಣ 15ಎ-28ಗುಂಟೆ<br><br>2023-24, 2024-25 ಮತ್ತು 2025-26ನೇ ಸಾಲಿನಲ್ಲಿ ವಸತಿ ಬಡಾವಣೆಗಳಿಗೆ ಅನುಮೋದನೆ ನೀಡಿದ ವಿವರಗಳನ್ನು **ಅನುಬಂಧ**ದಲ್ಲಿ ಲಗತ್ತಿಸಿದೆ. |
| ಆ) | ಖಾಸಗಿ ಬಿಲ್ಡರ್‌ಗಳು ಬೃಹತ್ ಪ್ರಮಾಣದಲ್ಲಿ ಬಡಾವಣೆಗಳನ್ನು ನಿರ್ಮಿಸುತ್ತಿದ್ದರೂ KUDA ಸ್ವತಃ ಭೂ ಸ್ವಾಧೀನ ಮಾಡಿಕೊಂಡು ಹೊಸ ಬಡಾವಣೆಗಳನ್ನು ನಿರ್ಮಿಸುವಲ್ಲಿ ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ರೈತರ ಸಹಭಾಗಿತ್ವದಡಿಯಲ್ಲಿ 50:50ರ ಅನುಪಾತದಲ್ಲಿ ಬಡಾವಣೆ ನಿರ್ಮಿಸಲು ದಿನಾಂಕ:08/11/2023ರಂದು ಹಾಗೂ 25/05/2024ರಂದು ವಿವಿಧ ಪತ್ರಿಕೆಗಳಲ್ಲಿ ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ಯಾವುದೇ ರೈತರು ಸ್ವ-ಇಚ್ಛೆಯಿಂದ ಭೂಮಿಯನ್ನು ನೀಡಲು ಮುಂದೆ ಬಂದಿರುವುದಿಲ್ಲ. ಮುಂದುವರೆದು ಪ್ರಾಧಿಕಾರದಿಂದ ಕೋಲಾರ ಅಮಾನಿಕೆರೆ, ಗದ್ದೆಕಣ್ಣೂರು ಹಾಗೂ ಟಮಕ ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳನ್ನು ವಸತಿ ಯೋಜನೆಗಾಗಿ ಅಭಿವೃದ್ಧಿ ಪಡಿಸಲು ಜಾಗವನ್ನು ಗುರುತಿಸಲಾಗಿದ್ದು, ಸರ್ವೆ ಕಾರ್ಯ ಪ್ರಗತಿಯಲ್ಲಿರುತ್ತದೆ. |

| | | |
|---|---|---|
| ಇ) | KUDA ವತಿಯಿಂದ ಕಳೆದ 3 ವರ್ಷಗಳಲ್ಲಿ ಎಷ್ಟು ಸ್ವಂತ ಬಡಾವಣೆಗಳನ್ನು (Own Layout) ಅಭಿವೃದ್ಧಿಪಡಿಸಲಾಗಿದೆ; ಇವುಗಳಲ್ಲಿ ನಿವೇಶನ ಹಂಚಿಕೆಯ ಸ್ಥಿತಿಗತಿ ಏನು; | ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಳೆದ 3 ವರ್ಷಗಳಲ್ಲಿ ಯಾವುದೇ ಬಡಾವಣೆಯನ್ನು ಅಭಿವೃದ್ಧಿ ಪಡಿಸಿರುವುದಿಲ್ಲ. |
| ಈ) | ರೈತರೊಂದಿಗೆ 50:50 ಅನುಪಾತದಲ್ಲಿ ಅಥವಾ ಜಂಟಿ ಪಾಲಿದಾರಿಕೆಯಲ್ಲಿ ಬಡಾವಣೆಗಳನ್ನು ನಿರ್ಮಿಸುವ ಯೋಜನೆಯನ್ನು ಕೋಲಾರದಲ್ಲಿ ಜಾರಿಗೊಳಿಸಲು ಸರ್ಕಾರ ಉದ್ದೇಶಿಸಿದೆಯೇ; ಹಾಗಿದ್ದಲ್ಲಿ 2026-27ನೇ ಸಾಲಿನಲ್ಲಿ ಘೋಷಿಸಲಾಗುವ ಹೊಸ ಬಡಾವಣೆಗಳು ಯಾವುವು.; | ಪ್ರಾಧಿಕಾರವು ಕೋಲಾರ ಅಮಾನಿಕೆರೆ, ಗದ್ದೆಕಣ್ಣೂರು ಮತ್ತು ಟಮಕ ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳನ್ನು ವಸತಿ ಯೋಜನೆಗಾಗಿ ಅಭಿವೃದ್ಧಿ ಪಡಿಸಲು ಗುರುತಿಸಲಾಗಿದೆ. |
| ಉ) | ಖಾಸಗಿ ಬಡಾವಣೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಮತ್ತು ದಾಖಲೆಗಳ ಗೊಂದಲದಿಂದ ಸಾರ್ವಜನಿಕರು ವಂಚನೆಗೊಳಗಾಗುತ್ತಿರುವುದನ್ನು ತಡೆಯಲು ಮತ್ತು "Housing for All" ಯೋಜನೆಯಡಿ ಕೈಗೆಟುಕುವ ದರದ ನಿವೇಶನಗಳನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕಟ್ಟುನಿಟ್ಟಿನ ಕ್ರಮಗಳೇನು? | ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಕಲಂ 17(2)ರಡಿಯಲ್ಲಿ ಅನುಮೋದಿಸುವ ವಸತಿ ಬಡಾವಣೆಗೆ ಅಂತಿಮ ಅನುಮೋದನೆ ನೀಡುವ ಪೂರ್ವದಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿದಾರರು/ ಭೂ ಮಾಲೀಕರು ಒದಗಿಸಿರುವ ಬಗ್ಗೆ ಪರಿಶೀಲಿಸಿಕೊಂಡು ಮತ್ತು ಸಂಬಂಧಪಟ್ಟ ಇಲಾಖೆಯಿಂದ ವಸತಿ ವಿನ್ಯಾಸದ ಅಭಿವೃದ್ಧಿ ಕಾಮಗಾರಿ ಪೂರ್ಣಗೊಳಿಸಿರುವ ಬಗ್ಗೆ ನಿರಾಕ್ಷೇಪಣಾ ಪತ್ರ ಪಡೆದ ನಂತರವೇ ಅಂತಿಮ ವಿನ್ಯಾಸ ನೀಡಿ ನಿವೇಶನಗಳನ್ನು ಬಿಡುಗಡೆಗೊಳಿಸಲಾಗಿರುತ್ತದೆ. |

**ಸಂಖ್ಯೆ: ನಅಇ 98 ಬೆಂರೂಪ್ರಾ 2026 (ಇ-ಕಡತ)**

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

# ಅನುಬಂಧ-1

## 2023-24ನೇ ಸಾಲಿನಲ್ಲಿ ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದಿಸಿರುವ ಖಾಸಗಿ ಬಡಾವಣೆಯ ವಿವರಗಳು

| ಕ್ರ. ಸಂ | ಗ್ರಾಮ | ಅನುಮೋದಿತ ವಿನ್ಯಾಸದ ಸರ್ವೆ ನಂಬರ್‌ಗಳು | ಅನುಮೋದಿತ ವಿನ್ಯಾಸದ ವಿಸ್ತೀರ್ಣ | ಅಂತಿಮ ಅನುಮೋದನೆ ನೀಡಿದ ದಿನಾಂಕ |
|---|---|---|---|---|
| 1. | ಕೋಲಾರ ಅಮಾನಿಕೆರೆ | 469/2, 469/3, 471/1 | 02ಎ-03ಗು | 16/03/2024 |
| 2. | ಬಸವನತ್ತ ಗ್ರಾಮ | 38/1, 38/2, 38/3, 38/4, 38/5, 39/2, 39/3, 39/4, 39/5, | 09ಎ-00ಗು | 05/02/2023 |
| 3. | ಪೇಟೆಚಾಮನ ಹಳ್ಳಿ | 19/6 | 01ಎ-18ಗು | 27/07/2023 |
| 4. | ಗದ್ದೆಕಣ್ಣೂರು ಗ್ರಾಮ | 35/2, 36/1, 36/2 36/3 37/2, 38/1 47/1 47/2 | 09ಎ-30.08ಗು | 30/06/2023 |
| | | ಒಟ್ಟು | 22ಎ-11.08ಗು | |

## 2024-25ನೇ ಸಾಲಿನಲ್ಲಿ ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದಿಸಿರುವ ಖಾಸಗಿ ಬಡಾವಣೆಯ ವಿವರಗಳು

| ಕ್ರ. ಸಂ | ಗ್ರಾಮ | ಅನುಮೋದಿತ ವಿನ್ಯಾಸದ ಸರ್ವೆ ನಂಬರ್‌ಗಳು | ಅನುಮೋದಿತ ವಿನ್ಯಾಸದ ವಿಸ್ತೀರ್ಣ | ಅಂತಿಮ ಅನುಮೋದನೆ ನೀಡಿದ ದಿನಾಂಕ |
|---|---|---|---|---|
| 1. | ಮಿಟ್ಟಕಲ್ಲಹಳ್ಳಿ ಗ್ರಾಮದ | 50/1, 50/9, 50/11, 50/12, 50/13, 50/14 | 03ಎ-19ಗು | 15/07/2025 |
| 2. | ಅಮಾನಿಕೆರೆ. | 411/1, 411/6, 412, 413/1, 2,3 414/1,6 428/4 | 09ಎ-00ಗು | 15/06/2024 |
| 3. | ಕೋಡಿರಾಮ ಸಂದ್ರ | 44/3 | 02ಎ-00ಗು | 11/03/2024 |
| | ಒಟ್ಟು | | 14ಎ-09ಗು | |

## 2025-26ನೇ ಸಾಲಿನಲ್ಲಿ ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದಿಸಿರುವ ಖಾಸಗಿ ಬಡಾವಣೆಯ ವಿವರಗಳು

| ಕ್ರ. ಸಂ | ಗ್ರಾಮ | ಅನುಮೋದಿತ ವಿನ್ಯಾಸದ ಸರ್ವೆ ನಂಬರ್‌ಗಳು | ಅನುಮೋದಿತ ವಿನ್ಯಾಸದ ವಿಸ್ತೀರ್ಣ | ಅಂತಿಮ ಅನುಮೋದನೆ ನೀಡಿದ ದಿನಾಂಕ |
|---|---|---|---|---|
| 1. | ಕೋಡಿರಾಮಸಂದ್ರ | 20/7, 20/2 | 0ಎ-37ಗು | 17/06/2025 |
| 2. | ಕೋಗಿಲಹಳ್ಳಿ | 15/2 | 01ಎ-22ಗು | 11/02/2025 |
| 3. | ಗದ್ದೆಕಣ್ಣೂರು | 35/1. 35/11, 35/12. | 06ಎ-20.04 ಗು | 27/05/2025 |

| | | | | |
|---|---|---|---|---|
| | ಗ್ರಾಮ | 35/13, 35/14, 48/1. 48/2, 48/3 48/4, 48/5 52/1, 53/2 | | |
| 4. | ಗದ್ದೆಕಣ್ಣೂರು ಗ್ರಾಮ | 38/2, 38/3 39/2, 39/3 | 02ಎ-05.08 ಗು | 27/05/2025 |
| 5. | ಗದ್ದೆಕಣ್ಣೂರು ಗ್ರಾಮ | 33/3, 37/1 | 03ಎ-08ಗು | 27/05/2025 |
| 6. | ಕೋಗಿಲಹಳ್ಳಿ | 13/4ರಲ್ಲಿ 1ಎ-17.08 ಗು ಪೈಕಿ 0-11.12ಗು ಮತ್ತು 13/6ರಲ್ಲಿ 1ಎ-3ಗು | 01ಎ-14.12ಗು | 01/07/2025 |

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ.